Ref.No. 34/2024

WW-1,

ದಿನಾಂಕಃ 22-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

1 ನೇ ಪಾರ್ಟಿ ಪರವಾಗಿಃ ಶ್ರೀ ಎಂ.ಎಸ್.ವಿ. ವಕೀಲರಿಂದ ಮುಂದುವರೆದ ಮುಖ್ಯ ವಿಚಾರಣೆಃ

ನಾನು ಈ ಕೆಳಕಂಡ ದಾಖಲಾತಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಈ ಕೆಳಕಂಡಂತೆ ಗುರುತಿಸಲಾಯಿತು.

| | | |
|---|---|---|
| Ex. | W-1 | 16.11.2022 ರಂದು ಕಾರ್ಮಿಕ ಅಧಿಕಾರಿಗೆ ಸಲ್ಲಿಸಿರುವ ದೂರಿನ ದೃಢೀಕೃತ ಪ್ರತಿ. |
| Ex. | W-2 | 18.03.2024 ರಂದು ಆಡಳಿತ ವರ್ಗದವರು ಕಾರ್ಮಿಕ ಅಧಿಕಾರಿಗೆ ಸಲ್ಲಿಸಿರುವ ತಕರಾರಿನ ದೃಡೀಕೃತ ಪ್ರತಿ |
| Ex. | W-3 | ಕಾರ್ಮಿಕ ಅಧಿಕಾರಿ ಸಲ್ಲಿಸಿರುವ 06.04.2024 ರ ವಾಸ್ತವಿಕ ವರದಿಯ ದೃಢೀಕೃತ ಪ್ರತಿ |

ಆದ್ದರಿಂದ ಕ್ಲೇಮು ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ.ಜೆ.ಪಿ. ವಕೀಲರಿಂದ:
2020 ನೇ ಇಸವಿಯಲ್ಲಿ ಡಿ .ಎಂ. ಎಸ್. ಟೆಕ್ನಾಲಜಿಸ್ ಸಂಸ್ಥೆಯನ್ನು ಬೇರೊಂದು ಆಡಳಿತ ವರ್ಗ ಖರೀದಿ ಮಾಡಿರುತ್ತದೆ ಎಂದರೆ ಸರಿ . ಹೊಸ ಆಡಳಿತ ವರ್ಗ, ತಮ್ಮ ಮೂಲ / ಹಳೆ ಕಾರ್ಖಾನೆ / ವ್ಯಾಪಾರವನ್ನು ಎಂದು ಪ್ರಾರಂಭಿಸಿದರು ಎಂಬ ವಿಷಯ ನನಗೆ ಗೊತ್ತಿಲ್ಲ.

2021-2022 ನೇ ಸಾಲಿಗೆ ಸಂಬಂಧಪಟ್ಟಂತೆ ಶೇಕಡಾ 20 ರಷ್ಟು ಬೋನಸ್ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತೇವೆ. ಬೋನಸ್ ಗಾಗಿ ಬೇಡಿಕೆ ಸಲ್ಲಿಸುವಾಗ ಎರಡನೇ ಪಕ್ಷಗಾರರಿಗೆ ಎಷ್ಟು ಲಾಭವಾಗಿದೆ , ಎಷ್ಟು ನಷ್ಟವಾಗಿದೆ ಎಂಬ ಮಾಹಿತಿ ನನಗೆ ಗೊತ್ತಿರುವುದಿಲ್ಲ. ಕಾರ್ಮಿಕ ಇಲಾಖೆಯಿಂದ ಈ ಪ್ರಕರಣವನ್ನು ನ್ಯಾಯಾಧೀಕರಣಕ್ಕೆ ಕಳುಹಿಸಲು ಸರ್ಕಾರ ಮಾಡಿರುವ ಆದೇಶದಲ್ಲಿ , ಯಾವ ಹಣಕಾಸು ವರ್ಷದ ಬೋನಸ್ ಬಗ್ಗೆ ವಿವಾದ ತೀರ್ಮಾನವಾಗಬೇಕು ಎಂದು ಉಲ್ಲೇಖವಿರುವುದಿಲ್ಲ ಎಂದರೆ ಸರಿ . ಸಾಕ್ಷಿದಾರರು ಮುಂದುವರೆದು ಸರ್ಕಾರದ ಆದೇಶದಲ್ಲಿ ಹಣಕಾಸಿನ ವರ್ಷ ಬರೆದಿರುವುದಿಲ್ಲ , ಆದರೆ ನಾವು 2021-2022 ನೇ ಸಾಲಿನ ಬೋನಸ್ ಬಗ್ಗೆ ಕಾರ್ಮಿಕ ಇಲಾಖೆಗೆ ಮನವಿ ಸಲ್ಲಿಸಿದ್ದೆವು.

ಸರ್ಕಾರಿ ಆದೇಶದ ಪ್ರತಿಯನ್ನು ನಾನು ಪಡೆದುಕೊಂಡಾಗ ನನಗೆ ಅದರಲ್ಲಿ ಆರ್ಥಿಕ ವರ್ಷ ಬರೆದಿರುವುದಿಲ್ಲ ಎಂಬ ವಿಷಯ ಗೊತ್ತಾಯಿತು. ಸರ್ಕಾರಿ ಆದೇಶದಲ್ಲಿ ಆರ್ಥಿಕ ವರ್ಷ ನಮೂದಾಗಬೇಕೆಂದು ಕೋರಿ , ತಿದ್ದುಪಡಿ ಸರ್ಕಾರಿ ಆದೇಶವಾಗಬೇಕೆಂದು ಕೋರಿ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ನಮ್ಮ ವಕೀಲರನ್ನು ಕೇಳಬೇಕು ಎಂದು ಹೇಳಿದರು . ಸರ್ಕಾರಿ ಆದೇಶದ ತಿದ್ದುಪಡಿಗಾಗಿ ಒಂದನೇ ಪಕ್ಷಗಾರರು ಅರ್ಜಿ / ಮನವಿ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ, ನಮ್ಮ ವಕೀಲರನ್ನು ಕೇಳಬೇಕು. ಮೂರು ವರ್ಷಗಳಿಗೊಮ್ಮೆ ಕಾರ್ಮಿಕರು ಮತ್ತು ಆಡಳಿತ ವರ್ಗ, ವೇತನದ ಬಗ್ಗೆ ದೀರ್ಘಾಕಾಲಿಕ ಸಂಧಾನ ಕರಾರು ಪತ್ರ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಸರಿ . ದೀರ್ಘಾಕಾಲಿಕ ಸಂಧಾನ ಕರಾರು ಪತ್ರದ ಪ್ರಕಾರ ಮೂರು ವರ್ಷಗಳಿಗೊಮ್ಮೆ ಮೂಲ ವೇತನ ಮತ್ತು ತುಟ್ಟಿ ಭತ್ಯೆ ಹೆಚ್ಚಾಗುತ್ತಿದೆ ಎಂದರೆ ಸರಿ .

2020-2021 ನೇ ಆರ್ಥಿಕ ಸಾಲಿನಲ್ಲಿ , ಬಹಳಷ್ಟು ಎರಡನೇ ಪಕ್ಷಗಾರರ ಕಾರ್ಮಿಕರ ಸಂಬಳ ರೂಪಾಯಿ 21,000/- ಸಾವಿರಕ್ಕಿಂತ ಹೆಚ್ಚಾಗಿತ್ತು ಎಂದರೆ ಸರಿಯಲ್ಲ . ಕಾರ್ಮಿಕರ ಹೆಸರು , ಹುದ್ದೆ ಮತ್ತು ಅವರ ವೇತನ ತೋರಿಸುವ ಪಟ್ಟಿಯನ್ನು ನಾನು ನ್ಯಾಯಾಧೀಕರಣದ ಮುಂದೆ ಹಾಜರುಪಡಿಸಿರುವುದಿಲ್ಲ. ಒಂದನೇ ಪಕ್ಷಗಾರರು / ಕಾರ್ಮಿಕ ಸಂಘ ಪ್ರತ್ಯೇಕವಾಗಿ ನೊಂದಣಿ ಯಾಗಿರುವುದಿಲ್ಲ , ಆದರೆ ಎ ಐ ಟಿ ಯು ಸಿ ಗೆ ಸಂಯೋಜನೆಯಾಗಿರುತ್ತದೆ . ಒಂದನೇ ಪಕ್ಷಗಾರರು / ಕಾರ್ಮಿಕ ಸಂಘ ಎ ಐ ಟಿ ಯು ಸಿ ಗೆ ಸಂಯೋಜನೆಯಾಗಿರುವುದಿಲ್ಲ ಎಂದರೆ ಸರಿಯಲ್ಲ .

ನನ್ನ ವಿರುದ್ಧ ಈಗ ಎರಡನೇ ಪಕ್ಷಗಾರರು ದುರ್ನಡತೆ ಆರೋಪದ ಬಗ್ಗೆ , ಎರಡು ಪ್ರತ್ಯೇಕ ಇಲಾಖಾ ವಿಚಾರಣೆಗಳನ್ನು ನಡೆಸುತ್ತಿದ್ದಾರೆ ಎಂದರೆ ಸರಿ . 2020-2021 ನೇ ಸಾಲಿಗೆ ಕೊಡಲಾಗಿರುವ ಶೇಕಡಾ 8.33 ಬೋನಸ್ ಕಾನೂನು ಬದ್ಧ ಮತ್ತು ನ್ಯಾಯಾಸಮತ್ತವಾಗಿದೆ ಎಂದರೆ ಸರಿಯಲ್ಲ . ಅರ್ಜಿಯಲ್ಲಿ ಕೋರಿರುವಂತೆ ಶೇಕಡಾ 20 ರಷ್ಟು ಬೋನಸ್ ಕೊಡಲು ಎರಡನೇ ಪಕ್ಷಗಾರರು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ .

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ನರಶಿಂಸಾ ಎಂ. ವಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.